

# ತಾಳ ಕಟ್ಟುವ ಕಾಯಕ



ಬೆಂಗಳೂರಿನ ಚಿಕ್ಕಪೇಟೆಯ ಗಲ್ಲಿಗಳಲ್ಲಿ ಹಾದು ಹೋಗುವವರು ಸಂಗೀತ ಪರಿಕರಗಳ ಅಂಗಡಿಗಳನ್ನು ಎಡವಿಯೇ ಸಾಗಬೇಕು. ಅದರಲ್ಲೂ ಬಳೇಪೇಟೆ ವೃತ್ತದ ಬಳಿಯಂತೂ ಸಂಗೀತ ಪರಿಕರಗಳ ಅಂಗಡಿಗಳು ಒಂದಾದ ಮೇಲೆ ಒಂದರಂತೆ ಹೆಜ್ಜೇನಿನ ಹುಟ್ಟಿಯಂತೆ ಹೆಣೆದುಕೊಂಡಿವೆ.

ಸಂಗೀತ ವಾದ್ಯ ಪರಿಕರಗಳಿಗೆ ಚಿಕ್ಕಪೇಟೆಯ ಬಳೇಪೇಟೆ ವೃತ್ತ ಹೆಸರಾಗಿದೆ. ಅಲ್ಲಿಯೇ ಇರುವ ಚರ್ಮ ವಾದ್ಯ ತಯಾರಿಕೆಯ ಅಂಗಡಿಗಳಲ್ಲಿ ಶಾಂತ ತಬಲಾ ವರ್ಕ್ಸ್ ಅಚ್ಚು ಕಟ್ಟಾದ ತಾಳ ವಾದ್ಯ ತಯಾರಿಕೆಯಿಂದ ಹೆಸರಾಗಿದೆ. ನಾಲ್ಕು ದಶಕಗಳಿಗೂ ಹೆಚ್ಚಿನ ಇತಿಹಾಸ ಈ ಅಂಗಡಿಗಿದೆ. 1964ರಿಂದ ಇಲ್ಲಿಯವರೆಗೂ ತಾಳ ಕಟ್ಟುವ ಕೆಲಸ ಇಲ್ಲಿ ನಡೆದುಕೊಂಡು ಬಂದಿದೆ. ದೇಶ-ವಿದೇಶದ ಹೆಸರಾಂತ ತಾಳ ವಾದ್ಯಗಾರರೂ ತಮ್ಮ ವಾದ್ಯಗಳ ರಿಪೇರಿಗಾಗಿ ಬರುವುದು ಇಲ್ಲಿಗೇ.

ಶಾಂತ ತಬಲಾ ವರ್ಕ್ಸ್‌ನ ಸ್ಥಾಪಕ ಆರ್.ಎಸ್.ಅನಂತರಾಮಯ್ಯ ಕೆಲಸ ಅರಸಿ ದೊಡ್ಡಬಳ್ಳಾಪುರದ ರಾಜಘಟ್ಟದಿಂದ 1950ರಲ್ಲಿ ನಗರಕ್ಕೆ ಬಂದಾಗ ಹೊಟ್ಟೆ ಪಾಡಿಗೆ ಕೈ ಹಿಡಿದದ್ದು ಈ ತಾಳ ಕಟ್ಟುವ ಕಸುಬು. ಅವರು ಚರ್ಮ ವಾದ್ಯಗಳ ತಯಾರಿಕೆಯನ್ನು ಕಲಿತಿದ್ದು ಕಾಟನ್ ಪೇಟೆಯ ವೆಂಕಟಪ್ಪ ಎಂಬುವರ ಬಳಿ. ಆನಂತರ ಚರ್ಮವಾದ್ಯಗಳ ತಯಾರಿ ಹಾಗೂ ರಿಪೇರಿಯಲ್ಲಿ ನಿಷ್ಣಾತರಾದರು.

ಅನಂತರಾಮಯ್ಯ ಅವರು ಕಾಲವಾಗಿ ಇಲ್ಲಿಗೆ ಎರಡು ವರ್ಷಗಳು ಕಳೆದಿವೆ. ಆದರೆ ಶಾಂತ ತಬಲಾ ವರ್ಕ್ಸ್‌ನಲ್ಲಿ ಇನ್ನೂ ತಾಳ ಕಟ್ಟುವ ಕಾಯಕ ಮುಂದುವರೆದೇ ಇದೆ. ತಂದೆಯ ನಂತರ ಅಂಗಡಿಯನ್ನು ಸಮರ್ಥವಾಗಿ ನಿಭಾಯಿಸುತ್ತಿರುವವರು ಅವರ ಮಗ ಶ್ರೀನಿವಾಸ್. ಬಿ.ಕಾಂ ಓದಿಯೂ ಚರ್ಮ ವಾದ್ಯ ತಯಾರಿಕೆಗೆ ಬಂದ ಅವರು ಇದಕ್ಕಾಗಿ ಅಂಚೆ ಕಚೇರಿ ನೌಕರಿಯ ಅವಕಾಶವನ್ನೂ ತ್ಯಜಿಸಿದವರು.

'ಕೇವಲ ಅಪ್ಪನ ಒತ್ತಾಯದಿಂದ ಈ ಕ್ಷೇತ್ರಕ್ಕೆ ಬರಲಿಲ್ಲ. ಸಹಜವಾಗಿಯೇ ಚಿಕ್ಕಂದಿನಿಂದಲೂ ಸಂಗೀತದ ವಾತಾವರಣ ಮನೆಯಲ್ಲಿತ್ತು. ಆದರೆ ವಾದ್ಯಗಳ ತಯಾರಿಯೇ ವಿಭಿನ್ನ ಅನುಭವ. ಹೀಗಾಗಿ ಬಿ.ಕಾಂ ಓದಿಯೂ ಇದೇ ವೃತ್ತಿಯನ್ನು ಆರಿಸಿಕೊಂಡೆ. ಸರ್ಕಾರಿ ಕೆಲಸವನ್ನು ಕಳೆದುಕೊಂಡ ಬಗ್ಗೆ ಬೇಸರವಿಲ್ಲ. ಲಯ ಮೂಲವಾದ ತಾಳ ವಾದ್ಯಗಳನ್ನು ತಯಾರಿಸುವ ಕೆಲಸದಲ್ಲಿ ತೃಪ್ತಿ ಇದೆ' ಎನ್ನುತ್ತಾರೆ ಶ್ರೀನಿವಾಸ್ ಹೆಮ್ಮೆಯಿಂದ.

ತಮ್ಮ 8 ನೇ ವಯಸ್ಸಿನಿಂದಲೇ ಎಂ.ವಾಸುದೇವರಾವ್ ಬಳಿ ಮೃದಂಗ ಕಲಿತ ಶ್ರೀನಿವಾಸ್ ಕಚೇರಿಗಳಲ್ಲಿ ಪಕ್ಕ ವಾದ್ಯ ಕಲಾವಿದರಾಗಿಯೂ ಹೆಸರು ಮಾಡಿದ್ದಾರೆ.

'ಸಂಗೀತದ ಬಗ್ಗೆ ಇಂದು ಎಲ್ಲ ಕಡೆಯೂ ಕಲಿಯುವ ಆಸಕ್ತಿ ಹೆಚ್ಚುತ್ತಿದೆ. ಆದರೆ ವಾದ್ಯ ತಯಾರಿಕೆಯ ಕೆಲಸದ ಬಗ್ಗೆ ಕೀಳರಿಮೆಯ ಭಾವ ಹೊಸಬರಲ್ಲಿದೆ. ಹೀಗಾಗಿ ವಾದ್ಯ ತಯಾರಿಕೆಯ ಕ್ಷೇತ್ರದಲ್ಲಿ ಕೇವಲ ಬೆರಳೆಣಿಕೆಯಷ್ಟು ಜನರು ಉಳಿದುಕೊಂಡಿದ್ದಾರೆ. ನನ್ನ ಮಕ್ಕಳು ಇಚ್ಛೆ ಪಟ್ಟರೆ ಇದೇ ವೃತ್ತಿಯಲ್ಲಿ ಮುಂದುವರೆಯಲು ಯಾವುದೇ ಅಭ್ಯಂತರವಿಲ್ಲ' ಎನ್ನುತ್ತಾರೆ ಅವರು.

ಇವರ ಈ ವೃತ್ತಿಗೆ ತಾಯಿ, ಮಡದಿ ಹಾಗೂ ಮಕ್ಕಳ ಒತ್ತಾಸೆಯೂ ಇದೆ. ತಬಲಾ, ಮೃದಂಗ, ಪಕಾವಾಜ್, ಡೋಲು, ಖಂಜರಿ ಹೀಗೆ ವಿವಿಧ ತಾಳ ವಾದ್ಯಗಳನ್ನು ತಯಾರಿಸುವ ಮತ್ತು ರಿಪೇರಿ ಮಾಡುವ ಶಾಂತ ತಬಲಾ ವರ್ಕ್ಸ್ ತಬಲಾ ರಿಪೇರಿಗೇ ಹೆಚ್ಚು ಹೆಸರಾಗಿದೆ. ಚಿಕ್ಕಪೇಟೆಯ ಲಾಲ್‌ದಾಸ್ ವೆಂಕಟರಮಣ ಸ್ವಾಮಿ ದೇವಸ್ಥಾನದ ಮುಂದಿರುವ ಶಾಂತ ತಬಲಾ ವರ್ಕ್ಸ್‌ಗೆ ಸುಮ್ಮನೆ ಭೇಟಿ ಕೊಟ್ಟರೂ, ಅರ್ಧ ಟೀ ಕುಡಿಸದೇ ಶ್ರೀನಿವಾಸ್ ನಿಮ್ಮನ್ನು ಕಳಿಸುವುದಿಲ್ಲ.

■ ದಯಾನಂದ